**ದಿನಾಂಕ ಃ 30.03.2023.**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ ಡಬ್ಲ್ಯೂ - 1**

**ಮುಂದುವರೆದ ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ ಃ**

ನಾನು ದಿಃ17.02.2021 ರಂದು ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತೇವೆ.

ಈ ಕೆಳಕಂಡ ದಾಖಲಾತಿಗಳಿರುತ್ತವೆಃ

1. ಸರ್ವೆ ನಂ. 57/5 ರ ಆರ್ ಟಿ ಸಿ
2. ಸರ್ವೆ ನಂ. 56/2 ರ ಆರ್ ಟಿ ಸಿ 2022-23
3. ಸರ್ವೆ ನಂ. 56/2 ರ ಆರ್ ಟಿ ಸಿ 2020-21
4. ಸರ್ವೆ ನಂ. 57/5 ರ ಆರ್ ಟಿ ಸಿ 2020-21
5. ಎಂ.ಆರ್ ನಂ. ಟಿ 16
6. ಎಂ.ಆರ್ ನಂ. ಟಿ 1
7. ನೋಟಿಸ್ ದಿಃ 27.01.2023

ಇವುಗಳನ್ನು ಈಗ ಕ್ರಮವಾಗಿ ನಿಪಿ.1 ರಿಂದ ನಿಪಿ.7 ಎಂದು ಗುರುತಿಸಲಾಯಿತು.

**(ಅರ್ಜಿದಾರರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ ಪಿ ಎಸ್ ವಕೀಲರಿಂದಃ**

ನಾನು ಇಂದು ಈ ಕೆಳಗಿನ ದಾಖಲೆಯನ್ನು ಹಾಜರುಪಡಿಸುತ್ತಿದ್ದೇನೆ.

1. ನೋಟೀಸ್ ದಿಃ 09.08.2018.

ಸದರಿ ದಾಖಲೆಯನ್ನು ನಿಪಿಃ 8 ಎಂದು ಗುರುತಿಸಲಾಯಿತು.

ಎದುರುದಾರರ ಪರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ರಾಮನಗರ.**

**ದಿನಾಂಕ ಃ 15.11.2024**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ ಡಬ್ಲ್ಯೂ - 1**
**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಜೆ.ಹೆಚ್.ಎಸ್.ಪಿ. ವಕೀಲರಿಂದಃ**

ನನ್ನ ಜಮೀನಿನ ಸರ್ವೆ ನಂ.ಗಳು 57/5 ಮತ್ತು 56/2. ಆ ಜಮೀನುಗಳಲ್ಲಿ 19 ಗುಂಟೆ ಪ್ರದೇಶದಲ್ಲಿ ಎದುರುದಾರರು ಲೈನ್ ಎಳೆದಿದ್ದಾರೆ. ನನ್ನ ಜಮೀನಿನ ಅಪಮೌಲ್ಯಕ್ಕಾಗಿ ಎದುರುದಾರರು ನನ್ನ ಖಾತೆಗೆ 2,22,338/- ರೂ.ಗಳನ್ನು ಜಮಾ ಮಾಡಿದ್ದಾರೆ ಎಂದರೆ ಸರಿ. ಲೈನು ಎಳೆಯುವ ಕಾಲಕ್ಕೆ ನನ್ನ ಜಮೀನಿನಲ್ಲಿ ಆಗಿದ್ದ ಬೆಳೆ ನಷ್ಟ ಪರಿಹಾರದ ಬಾಬ್ತು 13,581/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ.

2. ನನ್ನ ಜಮೀನಿನಲ್ಲಿದ್ದ 2 ಕಾಡು ಮರಗಳನ್ನು ಕಟಾವು ಮಾಡಿದರ ಬಾಬ್ತು ಎದುರುದಾರರು ನನಗೆ 880/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ಎದುರುದಾರರು ಒಟ್ಟಾರೆಯಾಗಿ ನನಗೆ 2,36,799/- ರೂ.ಗಳನ್ನು ಖಾತೆಗೆ ಜಮಾ ಮಾಡಿದ್ದಾರೆ ಎಂದರೆ ಸರಿ. 2018 ರಲ್ಲಿ ನನ್ನ ಜಮೀನಿನಲ್ಲಿ ಲೈನನ್ನು ಎಳೆದಿದ್ದಾರೆ.

3. ನನ್ನ ಜಮೀನಿನಲ್ಲಿ 1 ಗುಂಟೆ ಜಮೀನಿಗೆ ಈಗ ಬೆಲೆ 75,000/- ರೂ.ಗಳು ಇದೆ ಎಂದು ತೋರಿಸಲು ಇಲ್ಲಿ ದಾಖಲೆಯನ್ನು ಹಾಜರುಪಡಿಸಿಲ್ಲ. ಈಗಲೂ ಕೂಡ ಪೂರ್ತಿ ಜಮೀನು ನನ್ನ ಸ್ವಾಧೀನದಲ್ಲಿದೆ ಮತ್ತು ನಾನೇ ಅದರ ಮಾಲೀಕ ಎಂದರೆ ಸರಿ. ನನ್ನ ಜಮೀನಿನ ಅಪಮೌಲ್ಯ, ಬೆಳೆ ನಷ್ಟ ಪರಿಹಾರ, ಮರಗಳ ಬಾಬ್ತು ಪರಿಹಾರ ಎಲ್ಲಾ ಸೇರಿ ಎದುರುದಾರರು ನನಗೆ 2,36,799/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ಎದುರುದಾರರು ನನ್ನ ಜಮೀನಿಗೆ ಲೈನು ಎಳೆಯುವ ಕಾಲಕ್ಕೆ ಇದ್ದ ಸೂಕ್ತ ಬೆಲೆಯನ್ನು ನೀಡಿದ್ದರೂ ಸಹ ನಾನು ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**